ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ **(**ಆರ್**.**ಪಿ**.**ಸಂಖ್ಯೆ **57)** ನಮೂನೆ ಸಂಖ್ಯೆ **4** **(**ಸಿವಿಲ್**)** |

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ ನ್ಯಾಯಾಲಯ**,** ಹೊಸಕೋಟೆ

ಇವರ ನ್ಯಾಯಾಲಯದಲ್ಲಿ

**ಸಿ.ಸಿ.ನಂಬರ್ 1504-2018**

ಪಿ.ಡಬ್ಲು-2.

ಸಿ.ಡಬ್ಲು-2.

ಹೆಸರು : ಮುನಿಕೃಷ್ಣ
ತಂದೆಯ ಹೆಸರು : ವೆಂಕಟರಮಣಪ್ಪ
ವಯಸ್ಸು : 40
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಅಪ್ಪಸಂದ್ರ

ದಿ: 16-10-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.1, 3, 4 ಮತ್ತು 5 ರವರ ಪರಿಚಯವಿದೆ ಮತ್ತು ಅವರುಗಳು ನಮ್ಮ ಊರಿನವರು. ಆರೋಪಿತರ ಪರಿಚಯವಿಲ್ಲ.

ಪೊಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ಯಾವುದೇ ಹಲ್ಲೆ ಘಟನೆಯನ್ನು ನೋಡಿರುವುದಿಲ್ಲ ಮತ್ತು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ. ನನ್ನ ಸಮಕ್ಷಮ ಆರೋಪಿತರು ಚಾ.ಸಾ.1 ರವರನ್ನು ಅಕ್ರಮವಾಗಿ ಪ್ರತಿಬಂಧಿಸಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಮತ್ತು ಕಾಲಿನಿಂದ ಹೊಡೆದು ಜೀವ ಬೆದರಿಕೆ ಹಾಕಿರುವುದಿಲ್ಲ.

**(** ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.**)**

ಪಾಟೀ ಸವಾಲು: ಸಹಾಯಕ ಸರ್ಕಾರಿ ಅಭಿಯೋಜಕರಿಂದ .

ದಿ: 31.10.2018 ರಂದು ಸಂಜೆ 6.30 ಗಂಟೆ ಸಮಯದಲ್ಲಿ ನಾನು ಅಪ್ಪಸಂದ್ರ ಗ್ರಾಮದ ಭತ್ತೆಶ್ವರ ಗ್ರಾಮದ ಬಳಿ ಇದ್ದಾಗ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ವೆಂಕಟೇಶಪ್ಪರವರಿಗೆ ಸೇರಿದ ತಿಪ್ಪೆಗುಂಡಿಗೆ ಟ್ರಾಕ್ಟರ್ ಮತ್ತು ಜಿ.ಸಿ.ಬಿ ಯಿಂದ ಮಣ್ಣು ತುಂಬಿಸುತ್ತಿದ್ದು ಮತ್ತು ಸದರಿ ಸಮಯದಲ್ಲಿ ಚಾ.ಸಾ.1 ರವರು ಅಲ್ಲಿಗೆ ಬಂದು ಕೇಳಿದಾಗ ಆರೋಪಿತರು ಚಾ.ಸಾ.1 ರವರನ್ನು ಅಡ್ಡ ಗಟ್ಟಿ ಏನೋ ಬೋಳಿ ಮಗನೇ ನಿಮ್ಮ ಅಪ್ಪನ ಜಾಗ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದು ಕಾಲಿನಿಂದ ಒದ್ದು ತಿಪ್ಪೆಗುಂಡಿಗೆ ಬೀಳಿಸಿ ಗಾಯವನ್ನುಂಟು ಮಾಡಿದ್ದರು ಎಂದರೆ ಸರಿಯಲ್ಲ. ತದನಂತರ ಆರೋಪಿತರು ಚಾ.ಸಾ.೧ ರವರಿಗೆ ಈ ಜಾಗದ ವಿಚಾರಕ್ಕೆ ಮತ್ತೆ ಬಂದರೆ ಪ್ರಾಣ ತೆಗೆಯುವುದಾಗಿ ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ತದನಂತರ ನಾನು ಮತ್ತು ಚಾ.ಸಾ.3 ರವರು ಹೋಗಿ ಜಗಳ ಬಿಡಿಸಿದ್ದೇವೆ ಎಂದರೆ ಸರಿಯಲ್ಲ. ಈ ಮೇಲಿನಂತೆ ದಿ: 01.11.2018 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್.ಎಂ ವಕೀಲರಿಂದ: ಏನು ಇಲ್ಲ

ಮರುವಿಚಾರಣೆ:-ಇಲ್ಲ-
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ **(**ಆರ್**.**ಪಿ**.**ಸಂಖ್ಯೆ **57)** ನಮೂನೆ ಸಂಖ್ಯೆ **4 (**ಸಿವಿಲ್**)** |

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ ನ್ಯಾಯಾಲಯ**,** ಹೊಸಕೋಟೆ
ಇವರ ನ್ಯಾಯಾಲಯದಲ್ಲಿ
ಸಿ**.**ಸಿ**.**ನಂಬರ್ **1504-2018**

ಪಿ.ಡಬ್ಲು-3.
ಸಿ.ಡಬ್ಲು-3.

ಹೆಸರು : ವೆಂಕಟೇಶ್
ತಂದೆಯ ಹೆಸರು : ಚೆನ್ನಪ್ಪ
ವಯಸ್ಸು : 41
ಉದ್ಯೋಗ : ಕೂಲಿ
ವಾಸ ಸ್ಥಳ : ಅಪ್ಪಸಂದ್ರ

ದಿ: 16-10-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.1, 2 ಮತ್ತು 5 ರವರ ಪರಿಚಯವಿದೆ ಮತ್ತು ಅವರು ನಮ್ಮ ಊರಿನವರು. ಚಾ.ಸಾ.4 ರವರ ಪರಿಚಯವಿಲ್ಲ. ಆರೋಪಿತರ ಪರಿಚಯವಿದೆ.

ಪೊಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ಯಾವುದೇ ಹಲ್ಲೆ ಘಟನೆಯನ್ನು ನೋಡಿರುವುದಿಲ್ಲ ಮತ್ತು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ. ನನ್ನ ಸಮಕ್ಷಮ ಆರೋಪಿತರು ಚಾ.ಸಾ.1 ರವರನ್ನು ಅಕ್ರಮವಾಗಿ ಪ್ರತಿಬಂಧಿಸಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಮತ್ತು ಕಾಲಿನಿಂದ ಹೊಡೆದು ಜೀವ ಬೆದರಿಕೆ ಹಾಕಿರುವುದಿಲ್ಲ.

**(** ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು**.)**

ಪಾಟೀ ಸವಾಲು: ಸಹಾಯಕ ಸರ್ಕಾರಿ ಅಭಿಯೋಜಕರಿಂದ .

ದಿ: 31.10.2018 ರಂದು ಸಂಜೆ 6.30 ಗಂಟೆ ಸಮಯದಲ್ಲಿ ನಾನು ಅಪ್ಪಸಂದ್ರ ಗ್ರಾಮದ ಭತ್ತೇಶ್ವರ ಗ್ರಾಮದ ಬಳಿ ಇದ್ದಾಗ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ವೆಂಕಟೇಶಪ್ಪರವರಿಗೆ ಸೇರಿದ ತಿಪ್ಪೆಗುಂಡಿಗೆ ಟ್ರಾಕ್ಟರ್ ಮತ್ತು ಜಿ.ಸಿ.ಬಿ ಯಿಂದ ಮಣ್ಣು ತುಂಬಿಸುತ್ತಿದ್ದು ಮತ್ತು ಸದರಿ ಸಮಯದಲ್ಲಿ ಚಾ.ಸಾ.1 ರವರು ಅಲ್ಲಿಗೆ ಬಂದು ಕೇಳಿದಾಗ ಆರೋಪಿತರು ಚಾ.ಸಾ.1 ರವರನ್ನು ಅಡ್ಡ ಗಟ್ಟಿ ಏನೋ ಬೋಳಿ ಮಗನೇ ನಿಮ್ಮ ಅಪ್ಪನ ಜಾಗ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದು ಕಾಲಿನಿಂದ ಒದ್ದು ತಿಪ್ಪೆಗುಂಡಿಗೆ ಬೀಳಿಸಿ ಗಾಯವನ್ನುಂಟು ಮಾಡಿದ್ದರು ಎಂದರೆ ಸರಿಯಲ್ಲ. ತದನಂತರ ಆರೋಪಿತರು ಚಾ.ಸಾ.೧ ರವರಿಗೆ ಈ ಜಾಗದ ವಿಚಾರಕ್ಕೆ ಮತ್ತೆ ಬಂದರೆ ಪ್ರಾಣ ತೆಗೆಯುವುದಾಗಿ ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ತದನಂತರ ನಾನು ಮತ್ತು ಚಾ.ಸಾ.2 ರವರು ಹೋಗಿ ಜಗಳ ಬಿಡಿಸಿದ್ದೇವೆ ಎಂದರೆ ಸರಿಯಲ್ಲ. ಈ ಮೇಲಿನಂತೆ ದಿ: 01.11.2018 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.4 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್.ಎಂ ವಕೀಲರಿಂದ: ಏನು ಇಲ್ಲ

ಮರುವಿಚಾರಣೆ:-ಇಲ್ಲ-
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ **(**ಆರ್**.**ಪಿ**.**ಸಂಖ್ಯೆ **57)** ನಮೂನೆ ಸಂಖ್ಯೆ **4** **(**ಸಿವಿಲ್**)** |

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ ನ್ಯಾಯಾಲಯ**,** ಹೊಸಕೋಟೆ
ಇವರ ನ್ಯಾಯಾಲಯದಲ್ಲಿ
ಸಿ**.**ಸಿ**.**ನಂಬರ್ **1504-2018**

ಪಿ.ಡಬ್ಲು-4.
ಸಿ.ಡಬ್ಲು-5.

ಹೆಸರು : ಲೋಕೇಶ್
ತಂದೆಯ ಹೆಸರು : ನಾರಾಯಣಪ್ಪ
ವಯಸ್ಸು : 42
ಉದ್ಯೋಗ : ಕೂಲಿ
ವಾಸ ಸ್ಥಳ : ಅಪ್ಪಸಂದ್ರ

ದಿ: 16-10-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.1 ರಿಂದ 3 ರವರ ಪರಿಚಯವಿದೆ ಮತ್ತು ಅವರು ನಮ್ಮ ಊರಿನವರು. ಚಾ.ಸಾ.4 ರವರ ಪರಿಚಯವಿಲ್ಲ. ಆರೋಪಿತರ ಪರಿಚಯವಿದೆ.

ಈಗ ನನಗೆ ತೋರಿಸಿದ ನಿಪಿ.2 ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಯಾವಾಗ ಮತ್ತು ಎಲ್ಲಿ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಚಾ.ಸಾ.1 ರವರು ನನ್ನ ಸಮಕ್ಷಮ ಪೊಲೀಸರಿಗೆ ಯಾವುದೇ ಹಲ್ಲೆ ಜಾಗವನ್ನು ತೋರಿಸಿರುವುದಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ಯಾವುದೇ ಹಲ್ಲೆ ಜಾಗದ ಮಹಜರ್ ನ್ನು ಜರುಗಿಸಿರುವುದಿಲ್ಲ. ನನಗೆ ಪ್ರಸ್ತುತ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ.2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲು: ಸಹಾಯಕ ಸರ್ಕಾರಿ ಅಭಿಯೋಜಕರಿಂದ .

ದಿ: 31.10.2018 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಆರೋಪಿತರು ಅಪ್ಪಸಂದ್ರ ಗ್ರಾಮದ ಭತ್ತೇಶ್ವರ ದೇವಸ್ಥಾನದ ಬಳಿ ಇರುವ ವೆಂಕಟೇಶಪ್ಪರವರಿಗೆ ಸೇರಿದ ತಿಪ್ಪೆಗುಂಡಿಯ ಬಳಿ ಚಾ.ಸಾ.1 ರವರನ್ನು ಅಕ್ರಮವಾಗಿ ಪ್ರತಿಬಂಧಿಸಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ ಕುರಿತು ಮಹಜರ್ ಜರುಗಿಸುವ ಸಲುವಾಗಿ ನನ್ನನ್ನು ಪಂಚರರಾಗಿ ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಿ: 01.11.2018 ರಂದು ಬೆಳಿಗ್ಗೆ 9 ಗಂಟೆಗೆ ನಾನು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿದ್ದು, ಅಲ್ಲಿ ಚಾ.ಸಾ.1 ರವರು ಹಾಜರಿದ್ದು ಸ್ಥಳ ತೋರಿಸಿದಂತೆ ನನ್ನ ಮತ್ತು ಚಾ.ಸಾ.4 ರವರ ಸಮಕ್ಷಮ ಬೆಳಿಗ್ಗೆ 9 ರಿಂದ 9.45 ಗಂಟೆಯವರೆಗೆ ನಿಪಿ.2 ರಂತೆ ಮಹಜರ್ ನ್ನು ಜರುಗಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ನಿಪಿ.2 ಮಹಜರ್ ಗೆ ಪಂಚರನಾಗಿ ನಿಪಿ.2(ಬಿ) ರಂತೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್.ಎಂ ವಕೀಲರಿಂದ: ಏನು ಇಲ್ಲ

ಮರುವಿಚಾರಣೆ:-ಇಲ್ಲ-
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.